

ಚಿತ್ರ: ಶ್ರೀಕಂಠ ಶರ್ಮ

# ಟ್ರಾಫಿಕ್ ಭಯವಿಲ್ಲ.. ಕಚೇರಿಗೆ ನಡಿಗೆ!

**ಅಮೆರಿಕದ ಕೊಲರಡೊದಿಂದ ಬಂದ ಡೇವಿಡ್ ಬ್ಯಾಕ್**

ಕಾರು, ಬೈಕ್ ಮುಂತಾದ ವಾಹನಗಳ ಬಿಡಿಭಾಗಗಳನ್ನು ತಯಾರಿಸುವ ಕಂಪೆನಿ ತೆರೆಯಬೇಕು ಎಂದೇ ಅಮೆರಿಕದ ಕೊಲರಡೊದಿಂದ ಬೆಂಗಳೂರಿಗೆ ಬಂದವರು ಡೇವಿಡ್ ಬ್ಯಾಕ್. ಎಂಜಿನಿಯರಿಂಗ್ ಪದವಿ ಓದಿರುವ ಡೇವಿಡ್ 2011ಕ್ಕೆ ಬೆಂಗಳೂರಿಗೆ ಬಂದು ಉದ್ಯಮ ಆರಂಭಿಸುವುದಕ್ಕೂ ಕೆಲ ವರ್ಷ ಹಿಂದೆ ಒಮ್ಮೆ ಬೆಂಗಳೂರಿಗೆ ಬಂದಿದ್ದರು. ಇಲ್ಲಿನ ಉದ್ಯೋಗಾವಕಾಶ, ಉದ್ಯಮದ ಪ್ರಗತಿ, ಕೆಲಸದ ಗುಣಮಟ್ಟ ಎಲ್ಲವನ್ನೂ ಅಧ್ಯಯನ ಮಾಡಿ ವಾಪಸ್ಸಾಗಿದ್ದರು. ಇಲ್ಲಿ ಉದ್ಯಮ ಆರಂಭಿಸಿದರೆ ಅದು ಖಂಡಿತಾ 'ಕೈಹಿಡಿಯುತ್ತದೆ' ಎಂಬ ವಿಶ್ವಾಸ ಅವರಿಗೆ ಆಗಲೇ ಇತ್ತಂತೆ. ಹಾಗಾಗಿ ತಮ್ಮ ಮಿತ್ರ ಗ್ರೆಗ್ ಮೋರನ್ ಜತೆಗೆ ಇಂದಿರಾನಗರದಲ್ಲಿ ಕಂಪೆನಿ ಆರಂಭಿಸಿದರು.

ಈಗ ಡೇವಿಡ್ ಖಾಯಂ ಆಗಿ ಬೆಂಗಳೂರಿನಲ್ಲೇ ನೆಲೆ ನಿಂತಿದ್ದಾರೆ. ನಾಲ್ಕು ವರ್ಷ ಹಿಂದಿನ ಬೆಂಗಳೂರಿಗೂ ಇಂದಿನ ನಗರಕ್ಕೂ ಸಾಕಷ್ಟು ವ್ಯತ್ಯಾಸವಿದೆ, ಬಹಳ ಬದಲಾವಣೆಯೂ ಆಗಿದೆ. ನಗರ ವೇಗವಾಗಿ ಬೆಳೆಯುತ್ತಿದೆ ಎಂಬುದನ್ನು ಡೇವಿಡ್ ಗುರುತಿಸಿದ್ದಾರೆ.

'ಕೆಲವೇ ಕೆಲವು ವರ್ಷಗಳಲ್ಲಿ ಬೆಂಗಳೂರು ಜನಸಂಖ್ಯೆ, ನಗರಾಭಿವೃದ್ಧಿ, ಉದ್ಯೋಗಾವಕಾಶ ಬಹಳಷ್ಟು ಹೆಚ್ಚಿದೆ. ನಗರ ಬಹಳ ಕ್ಷಿಪ್ರವಾಗಿ ಪ್ರಗತಿಯಾಗುತ್ತಿದೆ. ಗಗನಚುಂಬಿ ಕಟ್ಟಡಗಳ ನಿರ್ಮಾಣವಾಗುತ್ತಿದೆ. ಟ್ರಾಫಿಕ್ ಅಂತೂ ಮಿತಿಮೀರಿದೆ. ವಿದೇಶಗಳಿಂದಲೂ ಸಾಕಷ್ಟು ಮಂದಿ ಬಂದು ಇಲ್ಲಿ ಉದ್ಯೋಗ ಪಡೆದು ಖಾಯಂ ಆಗಿ ನೆಲೆ ನಿಂತಿದ್ದಾರೆ. ಇಷ್ಟು ಕಡಿಮೆ ಅವಧಿಯಲ್ಲಿ ಇಷ್ಟೊಂದು ಬದಲಾವಣೆ ಆಗಿರುವುದು ನಿಜವಾಗಿಯೂ ನನಗೆ ಅಚ್ಚರಿ ಮೂಡಿಸಿದೆ' ಎನ್ನುತ್ತಾರೆ ಡೇವಿಡ್.

### ಟ್ರಾಫಿಕ್ ಕಿರಿಕಿರಿ

'ಇಲ್ಲಿನ ರಸ್ತೆ ದಿನದ ಎಲ್ಲ ಹೊತ್ತಿನಲ್ಲೂ ವಾಹನಗಳಿಂದ ತುಂಬಿರುತ್ತದೆ. ಹೀಗಾಗಿ ಟ್ರಾಫಿಕ್ ಜಾಮ್ ವಿಪರೀತ. ವಾಹನಗಳ ದಟ್ಟಣೆ ಮಿತಿ ಮೀರಿದ್ದನ್ನು ನೋಡಿದರೆ ಭಯವಾಗುತ್ತದೆ. ಅಮೆರಿಕದಲ್ಲಿ ಟ್ರಾಫಿಕ್ ವ್ಯವಸ್ಥೆ ಚೆನ್ನಾಗಿದೆ. ಎಲ್ಲವೂ ಸುವ್ಯವಸ್ಥಿತವಾಗಿರುವುದರಿಂದ ಅಲ್ಲಿನ ರಸ್ತೆಗಳಲ್ಲಿ ವಾಹನದಟ್ಟಣೆ ಆಗುವುದೇ ಇಲ್ಲ. ಇಲ್ಲಿ ಟ್ರಾಫಿಕ್ ಹೆಚ್ಚು ಎಂಬ ಕಾರಣಕ್ಕೆ ನಾನು ಆಫೀಸ್ ಪಕ್ಕದಲ್ಲೇ ಮನೆ ಮಾಡಿದ್ದೇನೆ. ಆಫೀಸ್‌ಗೆ ನಿತ್ಯ ನಡೆದುಕೊಂಡೇ ಹೋಗುವ ಕಾರಣ ದಿನನಿತ್ಯ ಟ್ರಾಫಿಕ್ ಕಿರಿಕಿರಿಯಿಂದ ಪಾರಾಗಿದ್ದೇನೆ' ಎಂದು ಹೇಳುತ್ತಾರೆ ಡೇವಿಡ್.

'ಒಂದು ಕಂಪೆನಿಯನ್ನು ನಡೆಸುವುದು, ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡು ನಿಭಾಯಿಸುವುದು ಬಹಳ ಕಷ್ಟದ ಕೆಲಸ. ಕಚೇರಿ ಕೆಲಸದ ಮಧ್ಯೆ ಬೇರೆ ಯಾವುದೇ ಕೆಲಸಕ್ಕೆ, ಚಟುವಟಿಕೆಗಳಿಗೆ ಸಮಯವೇ ಸಿಗುವುದಿಲ್ಲ. ಇಲ್ಲಿನ ಜನ ಬಹಳ ಸ್ನೇಹಪರರು. ವಿದೇಶೀಯರೊಡನೆ ಬಹಳ ಬೇಗನೆ ಹೊಂದಿಕೊಳ್ಳುತ್ತಾರೆ. ಸಹೋದ್ಯೋಗಿಗಳೂ ಬಹಳ ಬೇಗ ಸ್ನೇಹಿತರಾಗುತ್ತಾರೆ. ಹೀಗಾಗಿ ಇವರ ಜತೆ ಔದ್ಯೋಗಿಕವಾಗಿ ಮತ್ತು ವೈಯಕ್ತಿಕವಾಗಿ ಬೆರೆಯುತ್ತೇನೆ' ಎನ್ನುವುದು ಡೇವಿಡ್ ಅವರ ಸ್ಪಷ್ಟನುಡಿ.

'ಬೆಂಗಳೂರಿನ ಸುತ್ತಮುತ್ತ ಕೆಲವು ತಾಣಗಳು ಅಲ್ಲದೆ ಕೇರಳದ ಪ್ರವಾಸಿ ಜಾಗಗಳು ಬಹಳ ಚೆನ್ನಾಗಿವೆ. ಕಾಫಿ ಟೀ ತೋಟಗಳನ್ನು ನೋಡುವುದೇ ಚಂದ. ಮುಂಬಯಿಯಲ್ಲಿ ಉದ್ಯಮ ಚೆನ್ನಾಗಿದೆ. ದೆಹಲಿಯೂ ಪಾರಂಪರಿಕ ತಾಣಗಳನ್ನು ಹೊಂದಿದೆ ಎನ್ನುವ ಡೇವಿಡ್ ಇಲ್ಲಿ ಹಬ್ಬಗಳ ಆಚರಣೆ ಬಹಳ ಕುತೂಹಲಕಾರಿ. ದೀಪಾವಳಿ ಸಮಯದಲ್ಲಿ ಪಟಾಕಿಯ ಸದ್ದು ನನಗೆ ಬಹಳ ಹೊಸದು. ಮೊದಲ ಬಾರಿಗೆ ಈ ಸದ್ದು ಕೇಳಿದಾಗ ತುಂಬ ಹೆದರಿದ್ದೆ. ಓಣಂ ಹಬ್ಬವೂ ಬಹಳ ಚೆನ್ನಾಗಿರುತ್ತದೆ. ಓಣಂ ಹಬ್ಬ ಅಮೆರಿಕದಲ್ಲಿ ನಾವು ಆಚರಿಸುವ 'ಜ್ಯುವಿಷ್ ಫೆಸ್ಟಿವಲ್' ಅನ್ನೇ ಹೋಲುತ್ತದೆ' ಎನ್ನುತ್ತಾರೆ.

ವಾರಾಂತ್ಯದಲ್ಲಿ ನಗರ ಸುತ್ತುವುದು, ಹೋಟೆಲ್‌ನಲ್ಲಿ ಬೇರೆ ಬೇರೆ ತಿಂಡಿಗಳ ರುಚಿ ನೋಡುವುದು ಇವರ ಹವ್ಯಾಸವಂತೆ. ಇಂದಿರಾ ನಗರದಲ್ಲಿರುವ 'ದಿ ಬ್ಲ್ಯಾಕ್ ರಾಬಿಟ್' ಮತ್ತು ಬೈರೇ ಕ್ಲಬ್ ಎರಡು ಜಾಗಗಳು ಡೇವಿಡ್ ಅವರಿಗೆ ಬಹಳ ಪ್ರಿಯವಾದವು ಅಂತೆ. ಇಲ್ಲಿನ ಹೋಟೆಲ್‌ಗಳಲ್ಲಿ ಉತ್ತಮ ಗುಣಮಟ್ಟದ ತಿಂಡಿ–ಊಟ ಸಿಗುತ್ತದೆ. ಆದರೆ ಬಹಳ ದುಬಾರಿ. ಕೇರಳ ಶೈಲಿಯ ಅಪ್ಪಂ ಮತ್ತು ಬೀಫ್ ಕರಿ ಇವರಿಗೆ ಬಹಳ ಇಷ್ಟವಾದ ತಿನಿಸು ಅಂತೆ.

ತಮ್ಮ ಕಂಪೆನಿಯನ್ನು ಇನ್ನಷ್ಟು ಅಭಿವೃದ್ಧಿಪಡಿಸಿ ವಿಸ್ತರಿಸುವ ಗುರಿ ಡೇವಿಡ್‌ಗಿದೆ. ಇಲ್ಲಿ ಜನರ ಬೇಡಿಕೆ ಮತ್ತು ಆದ್ಯತೆಯನ್ನು ಅನುಸರಿಸಿ ಕಂಪೆನಿಯನ್ನು ಇನ್ನಷ್ಟು ವಿಸ್ತರಿಸಬೇಕು, ಬೇರೆ ಬೇರೆ ಶಾಖೆಗಳನ್ನೂ ತೆರೆಯಬೇಕು ಎನ್ನುವ ಇರಾದೆ ಇವರದು.

★ **ಅವನೀಶ್**